**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ**

**ಕೆ.ಆರ್.ನಗರ**

**ಓಎಸ್ 131/2018**

ಡಿ ಡಬ್ಲ್ಯೂ-1

**ದಿನಾಂಕ 16-06-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲು ಶ್ರೀ ಕೆ.ಎನ್.ಎಸ್ ವಾದಿ ಪರ ವಕೀಲರುಃ**

ನಮ್ಮ ತಂದೆ ಸಣ್ಣಮಲ್ಲೇಗೌಡ. ಸದರಿ ಸಣ್ಣಮಲ್ಲೇಗೌಡ ಮೊದಲನೆಯ ಹೆಂಡತಿ 1 ನೇ ವಾದಿ ಎಂದರೆ ಸರಿ. ಸದರಿ 1 ನೇ ವಾದಿಯ ಮಗಳು 2 ನೇ ವಾದಿ ಜಯಮ್ಮ ಎಂದರೆ ಸರಿ. ನಮ್ಮ ತಂದೆ 1 ಮತ್ತು 2 ನೇ ವಾದಿಯವರು ಜೀವಂತವಿದ್ದಾಗ ಮತ್ತು ಅವರ ವಿವಾಹವು ಚಾಲ್ತಿಯಲ್ಲಿದಾಗಲ್ಲೇ ನಮ್ಮ ತಾಯಿಯನ್ನು ಮದುವೆಯಾಗಿರುತ್ತಾರೆ ಎಂದರೆ ಸರಿ. ನಾನು, ನಮ್ಮ ತಾಯಿ ಅದೇ ರೀತಿ ವಾದಿಗಳು ಎಲ್ಲರೂ ಸಹ ಸಣ್ಣಮಲ್ಲೇಗೌಡರವರ ಕುಟುಂಬಸ್ಥರು ಎಂದರೆ ಸರಿ.

2. ಸಣ್ಣಮಲ್ಲೇಗೌಡರ ಒಟ್ಟು ಆಸ್ತಿಯನ್ನು ಪ್ರಸ್ತುತ ನಾವೇ ಅನುಭವಿಸುತ್ತಿದ್ದೇವೆ. ವಾದಿಗಳಿಗೆ ಸದರಿ ದಾವಾ ಸ್ವತ್ತುಗಳಲ್ಲಿ ಯಾವುದೇ ವಿಭಾಗವನ್ನು ಮಾಡಿ ಪ್ರತ್ಯೇಕವಾಗಿ ಭಾಗವನ್ನು ಕೊಟ್ಟಿರುವುದಿಲ್ಲ. 1 ನೇ ವಾದಿಯನ್ನು 2 ನೇ ವಾದಿಯನ್ನು ನೋಡಿಕೊಳ್ಳುತ್ತಿದ್ದಾರೆ ಎಂದರೆ ಸಾಕ್ಷಿ ಈ ಹಿಂದೆ ನನ್ನ ಜೊತೆ ಇದ್ದು ಪ್ರಸ್ತುತ 2 ನೇ ವಾದಿಯ ಜೊತೆ ಇದ್ದಾರೆ ಎಂದು ತಿಳಿಸಿರುತ್ತಾರೆ. ಈ ದಾವೆಯನ್ನು ವಾದಿಯು ಭಾಗಾಂಶಕ್ಕಾಗಿ ಸಲ್ಲಿಸಿರುತ್ತಾರೆ ಎಂದರೆ ಸರಿ.

3. ದಾವಾ ಷೆಡ್ಯೂಲ್ ಸ್ವತ್ತಿನ 1,2,5 ಮತ್ತು 6 ಸ್ವತ್ತುಗಳನ್ನು ಖರೀದಿ ಮಾಡುವ ಸಂದರ್ಭದಲ್ಲಿ ವಾದಿಗಳು ಮತ್ತು ನಾವು ಎಲ್ಲರೂ ಒಂದೇ ಕುಟುಂಬದಲ್ಲಿದ್ದೇವು. ಸದರಿ ಸ್ವತ್ತುಗಳನ್ನು ಖರಿದಿ ಮಾಡುವ ಕಾಲದಲ್ಲಿ 2 ನೇ ವಾದಿ ಮತ್ತು ನಾವು ಎಲ್ಲರೂ ಪ್ರಾಪ್ತ ವಯಸ್ಕರಾಗಿದ್ದೇವೆ ಎಂದರೆ ಸರಿ. ನಮ್ಮ ತಂದೆ ಮೃತ ಸಣ್ಣಮಲ್ಲೇಗೌಡರಿಗೆ ಕನ್ನಡ ಓದಲು ಬರೆಯಲು ಬರುತ್ತಿತ್ತು.

4. ಒಟ್ಟು ಕುಟುಂಬದಿಂದ ಬಂದ ಆದಾಯದಿಂದ ನಮ್ಮ ತಾಯಿ ವಿದ್ಯಾವಂತರಾದ ಕಾರಣಅವರ ಹೆಸರಿನಲ್ಲಿ ಷೆಡ್ಯೂಲ್ ಸ್ವತ್ತು 1,2 5 ಮತ್ತು 6 ಗಳನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿ. ದಾವಾ 3 ಮತ್ತು 4 ನೇ ಸ್ವತ್ತುಗಳು ಸರ್ಕಾರದಿಂದ ಮಂಜೂರಾದ ಸ್ವತ್ತುಗಳಾಗಿರುತ್ತವೆ. ಯಾವ ವರ್ಷದಲ್ಲಿ ಮಂಜೂರಾಗಿರ್ುವೆ ಎಂದು ನನಗೆ ಗೊತ್ತಿಲ್ಲ. ಷೆಡ್ಯೂಲ್ ಸ್ವತ್ತು 1,2 5 ಮತ್ತು 6 ಸ್ವತ್ತುಗಳನ್ನು ನಮ್ಮ ತಾಯಿ ಖರೀದಿಸಿದ್ದು ಅವುಗಳನ್ನು 3 ಮತ್ತು 4 ನೇ ಸ್ವತ್ತುಗಳನ್ನು ನಮ್ಮ ತಂದೆಗೆ ಸರ್ಕಾರದಿಂದ ಮಂಜೂರಾದ ನಂತರದಲ್ಲಿ ಖರೀದಿ ಮಾಡಿರುತ್ತಾರೆ ಎಂದರೆ ಸರಿ.

5. ನಮ್ಮ ತಂದೆ ಮೃತ ಪಟ್ಟಿರುತ್ತಾರೆ ಎಂದರೆ ಸರಿ. ನಮ್ಮ ತಂದೆ ಸಾಯುವ ಮುನ್ನ ಯಾವುದೇ ದಾಖಲೆಗಳನ್ನು ಬರೆದಿಟ್ಟು ಮೃತ ಪಟ್ಟಿರುವುದಿಲ್ಲ. ಆದ್ದರಿಂದ ಸದರಿ ಸ್ವತ್ತುಗಳು ನಮ್ಮ ಪಿತ್ರಾರ್ಜಿತ ಸ್ವತ್ತುಗಳು ಎಂದರೆ ಸರಿಯಲ್ಲ. ಸರ್ವೇ ನಂಬರ 92, 94 ಮತ್ತು 96 ಸ್ವತ್ತುಗಳನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ. ಸದರಿ ಸ್ವತ್ತುಗಳು ಪಿತ್ರಾರ್ಜಿತ ಸ್ವತ್ತುಗಳು ಎಂದು ತೋರಿಸಲು ದಾಖಲೆಗಳನ್ನು ನೀಡಿರುತ್ತೇವೆ.

ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಲಾಯಿತು.

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ ಎಂ

**(ಚಂದನ್.ಎಸ್)**

ಪ್ರಧಾನ ಸಿವಿಲ್ ನ್ಯಾಯಾಧೀಶರು,

ಮತ್ತು ಪ್ರದನ್ಯಾದಂ., ಕೆ.ಆರ್.ನಗರ